**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಹಗರಿಬೊಮ್ಮನಹಳ್ಳಿ .**

**ಸಿ.ಸಿ.ಸಂಖ್ಯೆಃ 424/2022**

**ಪಿರ್ಯಾದುದಾರರು :** ರಾಜ್ಯದ ಪರವಾಗಿ ಇಟ್ಟಿಗಿ ಪೊಲೀಸ್ ಠಾಣೆ

**ವಿರುದ್ಧ**

**ಆರೋಪಿತರು** :

1) ಪರಸಪ್ಪ ಯಡಮಾರನಹಳ್ಳಿ
ಬಿನ್ ಮಲ್ಲಪ್ಪ,
ವಯಸುಃ 45 ವರ್ಷ, ವೃತ್ತಿಃ ವ್ಯವಸಾಯ,

2) ಕಿರಣ್ ಕುಮಾರ್ ಯಡಮಾರನಹಳ್ಳಿ
ಬಿನ್ ಪರಸಪ್ಪ ,
ವಯಸುಃ 22 ವರ್ಷ, ವೃತ್ತಿಃ ವ್ಯವಸಾಯ ,

3) ಕಮಲಮ್ಮ ಕೋಂ ಪರಸಪ್ಪ,
ವಯಸುಃ 42 ವರ್ಷ, ವೃತ್ತಿಃ ಗೃಹಿಣಿ,

4) ಗೋಣೆಪ್ಪ ಯಡಮಾರನಹಳ್ಳಿ
ಬಿನ್ ಪರಸಪ್ಪ ,
ವಯಸುಃ 24 ವರ್ಷ, ವೃತ್ತಿಃ ವ್ಯವಸಾಯ ,

1 ರಿಂದ 4 ನೇ ಆರೋಪಿತರ ವಾಸಃ ಮಸರಿ ನೆಲ್ಕುದ್ರಿ ಗ್ರಾಮ,
ಹಗರಿಬೊಮ್ಮನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ.

**ದೋಷಾರೋಪಣೆ**

**ಶ್ರೀಮತಿ ಭಾಗ್ಯಲಕ್ಷ್ಮಿ, ಬಿ.ಕಾಂ. ಎಲ್ ಎಲ್.ಬಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಅದ ನಾನು 1 ರಿಂದ 4 ನೇ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ** ಏನೆಂದರೆಃ

ದಿನಾಂಕಃ 31.03.2022 ರಂದು ಸುಮಾರು ಬೆಳಿಗ್ಗೆ 10.00 ಗಂಟೆಗೆ ಇಟ್ಟಿಗಿ ಪೊಲೀಸ್ ಠಾಣಾ ಸರಹದ್ದಿನ ನೆಲ್ಕುದ್ರಿ ಗ್ರಾಮದ ಯಡಮಾರನಹಳ್ಳಿ ನಾಗಪ್ಪ ರವರ

ಹೊಲದಲ್ಲಿ, ಚಾಸಾ-1 ರಿಂದ 4 ರವರು ಕೆಲಸ ಮಾಡುತ್ತಿದ್ದಾಗ, 1 ರಿಂದ 4 ನೇ ಆರೋಪಿತರಾದ ನೀವು ಅಪರಾಧ ಎಸಗುವ ಸಮಾನ ಉದ್ದೇಶ ಹೊಂದಿ, ಚಾಸಾ-1 ರಿಂದ 4 ರವರಿಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿ ಆ ಮೂಲಕ ಅವರಿಗೆ ಉದ್ರೇಕವನ್ನುಂಟುಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಕಾರಣ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.504 ಹಾಗೂ ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಎರಡನೇಯದಾಗಿ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವು, ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ, ಆ ಪೈಕಿ 1 ನೇ ಆರೋಪಿತರಾದ ನೀವು ಸ್ವ-ಇಚ್ಛೆಯಿಂದ ಚಾಸಾ-1 ರವರಿಗೆ ಕಾಲಿನಿಂದ ಸೊಂಟಕ್ಕೆ ಒದ್ದು ಸಾದಾ ಸ್ವರೂಪದ ಗಾಯವನ್ನುಂಟು ಮಾಡಿದ್ದು, 4 ನೇ ಆರೋಪಿತರಾದ ನೀವು ಚಾಸಾ-2 ರವರಿಗೆ ಕಾಲಿನಿಂದ ಸೊಂಟಕ್ಕೆ ಹೊಡೆದು ಸಾದ ಸ್ವರೂಪದ ಗಾಯಗಳನ್ನು ಮಾಡಿದ್ದರಿಂದ 1 ಮತ್ತು 4 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.323 ಹಾಗೂ ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮೂರನೆಯದಾಗಿ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವು, ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ, ಆ ಪೈಕಿ 2 ನೇ ಆರೋಪಿತರಾದ ನೀವು ಸ್ವ-ಇಚ್ಛೆಯಿಂದ ಚಾಸಾ-1 ರವರಿಗೆ ಕಟ್ಟಿಗೆಯಿಂದ ಕೈಕಾಲುಗಳಿಗೆ ಹೊಡೆದು ಸಾದಾ ಸ್ವರೂಪದ ಗಾಯವನ್ನುಂಟು ಮಾಡಿದ್ದರಿಂದ 2 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.324 ಹಾಗೂ ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ನಾಲ್ಕನೆಯದಾಗಿ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವು, ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ, ಆ ಪೈಕಿ 1 1, 3 ಮತ್ತು 4 ನೇ ಆರೋಪಿತರಾದ ನೀವು ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಮಾಡಿದ ಕಾರಣ, 1, 3 ಮತ್ತು 4 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.506 ಹಾಗೂ ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

1 ರಿಂದ 4 ನೇ ಆರೋಪಿತರಾದ ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

**1. 1 ರಿಂದ 4 ನೇ ಆರೋಪಿತರಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ಅರ್ಥವಾಯಿತೇ?**

ಉತ್ತರಃ

**2. 1 ರಿಂದ 4 ನೇ ಆರೋಪಿತರಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?**

ಉತ್ತರಃ

(ಮೇಲಿನ ದೋಷಾರೋಪಣೆಯನ್ನು 1 ರಿಂದ 4 ನೇ ಆರೋಪಿತರಿಗಿಂದು ಓದಿ ಹೇಳಿ ಕೇಳಲಾಯಿತು. 1 ರಿಂದ 4 ನೇ ಆರೋಪಿತರು ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 06.07.2023 ರಂದು ತರೆದ ನ್ಯಾಯಲಯದಲ್ಲಿ ಧೃಡೀಕರಿಸುತ್ತೇನೆ).

**ದಿನಾಂಕ : 06.07.2023**
**ಸ್ಥಳಃಹಗರಿಬೊಮ್ಮನಹಳ್ಳಿ .**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.**
**ನ್ಯಾಯಾಲಯ ಹಗರಿಬೊಮ್ಮನಹಳ್ಳಿ**

1 ನೇ ಆರೋಪಿ ಸಹಿ :

2 ನೇ ಆರೋಪಿ ಸಹಿ :

3 ನೇ ಆರೋಪಿ ಸಹಿ :

4 ನೇ ಆರೋಪಿ ಸಹಿ :